ಮಾಡಿದ್ದರು. ಅವರು ಸಾಂಸ್ಕೃತಿಕವಾಗಿ ಸಾಹಿತ್ಯವಾಗಿ ಅನೇಕ ಕ್ಷೇತ್ರಗಳಲ್ಲಿ ಆಸಕ್ತಿಯನ್ನು ಹೊಂದಿದ್ದರು. ಇವತ್ತು ಏಕೈಕೆ ಮಹಿಳಾ ರಾಜ್ಯಪಾಲರಾಗಿ ಕರ್ನಾಟಕದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾಕ್ಕಾಗಿ ಇಡೀ ರಾಜ್ಯ ಅವರನ್ನು ನೆನೆಪಿಸಬೇಕಾಗುತ್ತದೆ. ಅವರು ನಮ್ಮನ್ನು ಅಗಲಿ ಹೋದ ಕಾರಣ ನಮ್ಮ ಸಂತಾಪವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುತ್ತೇನೆ. ಅದೇ ತರಹ ಹಿರಿಯರಾದ ಎಂ.ಎನ್.ನಾಗನೂರರವರು, ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಟೆಯವರು, ಕೆ.ಡಿ.ಪಾಟೀಲ್‌ರವರು, ಇವರೂ ಈ ಶಾಸನ ಸಭೆಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರಿಗೂ ನಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಇನ್ನೊಬ್ಬ ಈ ರಾಜ್ಯ ಕಂಡಂತಹ ಮೇಧಾವಿ ಒಬ್ಬ ಸಂಗೀತಗಾರ, ಗಾಯಕ ಎಂದರೆ ಡಾ: ಪಿ.ಬಿ.ಶ್ರೀನಿವಾಸ್‌ರವರು, ಇಡೀ ಕರ್ನಾಟಕದ ಜನತೆಗೆ ಬಹಳ ಅಚ್ಚುಮೆಚ್ಚಿನ ಗಾಯಕರಾಗಿದ್ದರು. ಈ ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಬಿಟ್ಟು ಹೋಗಿದ್ದಾರೆ, ಇಡೀ ಸಿನಿಮಾ ಲೋಕಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂತಹ ಡಾ: ಶ್ರೀನಿವಾಸ್‌ರವರು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನಿಧನಕ್ಕೂ ನಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನದ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

[ಈ ಹಂತದಲ್ಲಿ ಸದನವು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿತು]

ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.

3. ಚುನಾವಣೆ ಪ್ರಸ್ತಾವ

ವಿಷಯ : ಕರ್ನಾಟಕ ವಿಧಾನಸಭೆ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ ಅನುಸಾರ ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಕಾನೂನು ಸಚಿವರು ಚುನಾವಣೆ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]: ಮಾನ್ಯ ಅಧ್ಯಕ್ಷರೆ,

1] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ 265 [1]ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

2] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268 [1]ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

3] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271 [1]ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

4] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272 [1]ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತೆಗಳ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

5] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277 [1]ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

6] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

7] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283 [1]ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

8] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ

ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

9] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

10] ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370 [2]ನೇ ನಿಯಮದ ಅನುಸಾರವಾಗಿ ಈ ಸಭೆ ಸದನ ಸಮಿತಿ [ವಸತಿ ಸೌಕರ್ಯಗಳ ಸಮಿತಿ]ಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

11] 1994ನೇ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 21[1] [vii]ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಒಂದು ಕ್ರಿಯಾಲೋಪ, ಏನೆಂದರೆ, ಬಹಳ ಕಷ್ಟಪಟ್ಟು ಸದನ ಸಮಿತಿಗಳನ್ನು ರಚನೆ ಮಾಡುತ್ತೀರಿ. ಆ ಸಮಿತಿಗಳು ಕೊಟ್ಟಂಥ ವರದಿಗಳನ್ನು ವಿಧಾನಸಭೆಯಲ್ಲಿ ತೆಗೆದು ನೋಡುವಂಥ ಸೌಜನ್ಯತೆ ಇದೆಯಾ? ನಾವು ಕಷ್ಟಪಟ್ಟು ಸಮಿತಿಗಳಲ್ಲಿ ಕೆಲಸ ಮಾಡಿ ವರದಿಗಳನ್ನು ತಯಾರು ಮಾಡಿ ಕೊಟ್ಟರೆ, ಅವನ್ನು ಇಲ್ಲಿ ಮಂಡನೆ ಮಾಡಿದಾಕ್ಷಣ ಮತ್ತೆ ಅದನ್ನು ಈ ಸದನದಲ್ಲೇ ಬಹು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥ ಸೌಜನ್ಯತೆ ಇದೆಯಾ? ಹಾಗಿದ್ದ ಮೇಲೆ ಏತಕ್ಕೋಸ್ಕರ ಸಮಿತಿಗಳನ್ನು ರಚನೆ ಮಾಡಬೇಕು?

ಅಧ್ಯಕ್ಷರು : ಈ ಸಮಿತಿಗಳು ಕೊಟ್ಟಂಥ ವರದಿಗಳನ್ನು ಈ ಸದನದ ಮುಂದೆ ಮಂಡಿಸಲೇ ಬೇಕು ಮಂಡಿಸುತ್ತಾ ಬಂದಿದ್ದಾರೆ, ಯಾವುದೇ ಸದಸ್ಯರು ಅಪೇಕ್ಷೆಪಟ್ಟರೆ ಆ ವರದಿಗಳ ಮೇಲೆ ಚರ್ಚೆ ಮಾಡುವುದಕ್ಕೆ ಸಂಪೂರ್ಣ ಅವಕಾಶವಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅಧ್ಯಕ್ಷರೆ, ಇದುವರೆವಿಗೂ ಆ ರೀತಿ ಪ್ರಸ್ತಾಪ ಆಗಿಲ್ಲ. ನಾವು ಬಹಳ ಸಾರಿ ಕೇಳಿದ್ದೇವೆ.

ಅಧ್ಯಕ್ಷರು : ಅದು ಸದಸ್ಯರ ಕರ್ತವ್ಯ. ನೀವೇ ಆ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದುವರೆವಿಗೂ ಆ ರೀತಿ ಪ್ರಸ್ತಾಪ ಆಗಿಲ್ಲ, ದಯಮಾಡಿ, ಅಧ್ಯಕ್ಷರು ಹೊಸದಾಗಿ ಬಂದಿದ್ದೀರಿ, ಈ ಸಾರಿ ನೀವಾದರೂ ಅದಕ್ಕೆ ಚಾಲನೆ ಮಾಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು : ನಾನು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ಸಮಿತಿಯ ವರದಿಗಳ ಬಗ್ಗೆ ಚರ್ಚೆ ಮಾಡುವಂಥ ಉತ್ಸಾಹ, ಕುತೂಹಲ ಮಾನ್ಯ ಸದಸ್ಯರಲ್ಲಿ ಬಂದರೆ ಭಾರಿ ಒಳ್ಳೆಯದು, ಆ ಸಂಸ್ಕೃತಿ ಈ ಸಾರಿ ಬೆಳೆಯುತ್ತದೆಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವಲಿಂಗೇಗೌಡರು ಎತ್ತಿರುವ ಪ್ರಶ್ನೆ ಯೋಗ್ಯವಾಗಿದೆ. ಬಹುಶಃ ಈ ಸದನದ ಇತಿಹಾಸದಲ್ಲಿ ಯಾವುದೇ ಸಮಿತಿಗಳು ಕೊಟ್ಟುಂಥ ವರದಿಗಳ ಮೇಲೆ ಚರ್ಚೆಯಾಗಿರುವುದು ಅತ್ಯಂತ ವಿರಳ, ಅವರ ಸಲಹೆ ಸೂಕ್ತವಾಗಿದೆ. ಅದು ಸದಸ್ಯರ ಹಕ್ಕು ಬಹುಶಃ ಸದಸ್ಯರಿಂದ ಸಮಿತಿಗಳ ವರದಿ ಬಗ್ಗೆ ಚರ್ಚೆಗಳನ್ನು ಮಾಡಬೇಕೆನ್ನುವ ಪ್ರಸ್ತಾಪ ಬಂದಂಥ ಸಂದರ್ಭದಲ್ಲಿ ಅದಕ್ಕೆ ಕಾಲಾವಕಾಶವನ್ನು ನಿಗದಿ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ. ತಾವು ಅನುಮತಿ ಕೊಡುವುದು.

ಅಧ್ಯಕ್ಷರು : ಖಂಡಿತಾ ಒಳ್ಳೆಯ ಸಲಹೆ, ಎಲ್ಲರೂ ಒಪ್ಪಿಕೊಳ್ಳೋಣ, ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆ ಬಗ್ಗೆ ಮೆನ್ಶನ್ ಮಾಡುತ್ತೇನೆ, preliminary submission ಮಾಡುತ್ತೇನೆ, ತಾವು ಕನ್ವಿನ್ಸ್ ಆದ ಮೇಲೆ ಆ ಬಗ್ಗೆ ಪೂರ್ಣ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ತಾವು ಈ ಸ್ಥಾನದಲ್ಲಿ ಕುಳಿತು ಕಾರ್ಯನಿರ್ವಹಿಸಿದ್ದೀರಿ. ನಾನೇನೂ ಹೇಳಬೇಕಾದ್ದಿಲ್ಲ. ಆದರೆ, ರಾಜ್ಯಪಾಲರ ಭಾಷಣದಲ್ಲಿ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಕ್ತವಾದ ಅವಕಾಶವಿದೆ. ಆ ಅವಕಾಶವನ್ನು ತಾವು ಬಳಸಿಕೊಂಡರೆ ಇತಿಮಿತಿಯಿಲ್ಲದೆ ಎಷ್ಟು ಬೇಕಾದರೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನಾನು ಮಾಡಿಕೊಡುತ್ತೇನೆ. ಆದುದರಿಂದ ರಾಜ್ಯಪಾಲರ ಭಾಷಣವನ್ನು ಮಂಡಿಸುವದಕ್ಕೆ ಅವಕಾಶ ಕೊಡಿ, ಅದರಲ್ಲೇ ಎಲ್ಲವನ್ನು ಹೇಳಿ.